ಕಾರ್ಪೊರೇಷನ್ ಸಹ ಕಾರಣವಾಗಿದೆ ಸ್ವಲ್ಪಮಟ್ಟಿಗೆ ಗುತ್ತಿಗೆದಾರರೂ ಕಾರಣರಾಗಿದ್ದಾರೆ ಮರಗಳನ್ನು ಕಡಿಯಲು ಪರವಾನಗಿ ತರುವಲ್ಲಿ ಸ್ವಲ್ಪ ವಿಳಂಬವಾಗಿದೆ ನಗರಪಾಲಿಕೆಯವರು ಸಮಯಕ್ಕೆ ಸರಿಯಾಗಿ ಭೂಸ್ವಾಧೀನವನ್ನು ಕನ್‌ಸ್ಟ್ರಕ್ಷನ್ ಕಂಪನಿಯವರಿಗೆ ವಹಿಸಿಕೊಡದಿರುವುದು, ಹೀಗೆ ಎರಡು ಮೂರು ಕಾರಣಗಳಿಂದ ಸ್ವಲ್ಪ ವಿಳಂಬವಾಗಿದೆ ತಾವು ಹೇಳಿದಂತೆ ಬಡ್ಡಿ ಕೂಟ್ಟು ಹಣವನ್ನು ತಂದು ಈ ಕೆಲಸವನ್ನು ಮಾಡುತ್ತಿದ್ದೇವೆ ಶೇಕಡ 12ರಷ್ಟು ಬಡ್ಡಿ ಕೊಟ್ಟು ಮುಂದೆ ಈ ಹಣವನ್ನು ತೀರಿಸಬೇಕು ಈ ಹಣದಲ್ಲಿ ಶೇಕಡ 70ರಷ್ಟು ಸಾಲ, 30ರಷ್ಟು ಸಬ್ಸಿಡಿ ರೂಪದಲ್ಲಿ ಒದಗಿಸಿದ್ದಾರೆ ಎಷ್ಟು ತ್ವರಿತವಾಗಿ ಈ ಕಾಮಗಾರಿಯನ್ನು ಮುಗಿಸಬೇಕೆಂಬ ತಮ್ಮ ಅಪೇಕ್ಷೆ ಇದೆಯೋ ಅದಕ್ಕಿಂತಲೂ ವೇಗವಾಗಿಯೇ ಈ ಕಾಮಗಾರಿಯ ಕೆಲಸವನ್ನು ಮುಗಿಸುತ್ತೇವೆಂಬ ಭರವಸೆಯನ್ನು ಈ ಸದನದ ಮೂಲಕ ಅವರಿಗೆ ಕೊಡುತ್ತಿದ್ದೇನೆ

ಶ್ರೀ ಹೆಚ್ ಎಸ್ ಶಂಕರಲಿಂಗೇಗೌಡ ಕೆಲಸ ವಿಳಂಬವಾಗಿದ್ದರಿಂದ ಅದಕ್ಕೆ ಎಸ್ಕಲೇಷನ್ ಚಾರ್ಜಸ್‌ನ್ನು ಕ್ಲೈಮ್ ಮಾಡುತ್ತಾರೆ ಅದನ್ನು ಕೊಡಲು ಸರ್ಕಾರ ಸಿದ್ಧವಿದೆಯೇ? ವಿಳಂಬ ಮಾಡಿರುವವರು ಗುತ್ತಿಗೆದಾರರು ಪುನಃ ಪುನಃ ಅವರ ಮೇಲೆ ಒತ್ತಡವನ್ನು ಹಾಕಿ ಎಸ್ಕಲೇಷನ್ ಚಾರ್ಜಸ್‌ನ್ನು ಕ್ಲೇಮ್ ಮಾಡಿದರೆ ಸರ್ಕಾರ ಕೊಡಲು ತಯಾರಿದೆಯೇ? ಗುಣಮಟ್ಟ ಹೇಗಿದೆ ಎಂಬುದನ್ನು ಪರೀಕ್ಷೆ ಮಾಡಲು ಕ್ವಾಲಿಟಿ ಕಂಟ್ರೋಲ್ ಅನ್ನು ಏನಾದರೂ ನೇಮಕವೇನಾದರೂ ಮಾಡಿದ್ದೀರಾ

ಶ್ರೀ ಡಿ ಬಿ ಚಂದ್ರೇಗೌಡ ಗುಣಮಟ್ಟವನ್ನು ಸ್ಥಿರೀಕರಿಸಿದ ಮೇಲೆಯೇ ಗುತ್ತಿಗೆದಾರರಿಗೆ ಹಣವನ್ನು ಕೊಟ್ಟಿರತಕ್ಕದ್ದು ಎಲ್ಲೆಲ್ಲಿ ಗುಣಮಟ್ಟದ ದೋಷಗಳು ಕಂಡುಬಂದಿವೆಯೋ ಅಲ್ಲಿ ಹಣವನ್ನು ಮರುಪಾವತಿ ಮಾಡಿಲ್ಲ ಎರಡನೆಯದಾಗಿ, ಎಸ್ಕಲೇಷನ್ ಬಗ್ಗೆ ಗುತ್ತಿಗೆದಾರರು ಕೇಳಿದರೆ ಅದು ನ್ಯಾಯಸಮ್ಮತವಾಗಿದ್ದಲ್ಲಿ ಪರಿಶೀಲನೆ ಮಾಡಬಹುದು ಗುತ್ತಿಗೆದಾರರೇ ಕೇಳದಿರುವ ಪ್ರಶ್ನೆಯನ್ನು ತಾವೇಕೆ ಕೇಳಿದಿರೋ ಗೊತ್ತಾಗುತ್ತಿಲ್ಲ

ಶ್ರೀ ಹೆಚ್ ಎಸ್ ಶಂಕರಲಿಂಗೇಗೌಡ ನಮಗೆ ತಿಳಿದುಬಂದ ಪ್ರಕಾರ ಹೇಳುತ್ತಿದ್ದೇವೆ ಇದರಲ್ಲಿ ವಸ್ತು ಸ್ಥಿತಿ ಇರಬಹುದು ಇಲ್ಲದಿರಬಹುದು, ಎಸ್ಕಲೇಷನ್ ಕಾಸ್ಟ್ ಕೇಳುತ್ತಿದ್ದಾರೆಂದು ಇಂಜಿನಿಯರ್‌ಗಳು ಹೇಳುತ್ತಿದ್ದಾರೆ ಆ ರೀತಿ ಎಸ್ಕಲೇಷನ್ ಕಾಸ್ಟ್ ಕೇಳಿದರೆ ಕೊಡಲು ಸರ್ಕಾರ ತಯಾರಿದೆಯೇ?

ಶ್ರೀ ಡಿ ಬಿ ಚಂದ್ರೇಗೌಡ ನಮಗೆ ಆ ರೀತಿ ಯಾವುದೇ ಕೋರಿಕೆ ಬಂದಿಲ್ಲ

ಮೈಸೂರು ತಾಲ್ಲೂಕಿನಲ್ಲಿ ಪೊಲೀಸ್ ಠಾಣೆಗಳ ಪ್ರಾರಂಭ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 4(507)

ಸದಸ್ಯರ ಹೆಸರು ಶ್ರೀ ಗುರುಸ್ವಾಮಿ ಎ ಎಸ್ (ಚಾಮುಂಡೇಶ್ವರಿ)

ಉತ್ತರಿಸುವ ಸಚಿವರು ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ(ಗೃಹ ಸಚಿವರು)

ಪ್ರಶ್ನೆ

ಅ) ಮೈಸೂರು ತಾಲ್ಲೂಕಿನ ಎಪಿಎಂಸಿ ಯಾರ್ಡ್ ಬಳಿಯಲ್ಲಿ ಲಕ್ಷಾಂತರ ರೂ ಗಳ ವ್ಯವಹಾರವಿದ್ದು ವಾಹನಗಳ ಓಡಾಟ ಹೆಚ್ಚಿದ್ದು ಅಪರಾಧಗಳ ಸಂಖ್ಯೆ ಗಣನೀಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹೌದಾದರೆ ಇಲ್ಲಿ ಪೋಲೀಸ್ ಠಾಣೆ ಪ್ರಾರಂಭಿಸಲು ಇರುವ ಅಡಚಣೆಗಳೇನು?

ಉತ್ತರ

ಅ) ವರದಿಯಾಗಿರುವ ಅಪರಾಧಗಳ ಸಂಖ್ಯೆ ಗಮನಾರ್ಹವಾಗಿರುವುದಿಲ್ಲ

ಆ) ಉದ್ಭವಿಸುವುದಿಲ್ಲ

ಶ್ರೀ ಎ ಎಸ್ ಗುರುಸ್ವಾಮಿ ಮಾನ್ಯ ಅಧ್ಯಕ್ಷರೆ, ಇವರೇನು ಉತ್ತರವನ್ನು ಒದಗಿಸಿದ್ದಾರೆ ಅದು ಸಮರ್ಪಕವಾಗಿಲ್ಲವಂಬುದಕ್ಕೆ ತೃಪ್ತಿಕರವಾಗಿಲ್ಲವೆಂಬುದಕ್ಕೆ ತಮ್ಮ ಮುಂದೆ ಸಬ್‌ಸ್ಟ್ಯಾನ್‌ಷಿಯೇಟ್ ಮಾಡುವುದಕ್ಕೆ ಹೇಳುತ್ತೇನೆ ಅವರ ಉತ್ತರದಲ್ಲಿ ಅಪರಾಧಿಗಳ ಸಂಖ್ಯೆ ಗಮನಾರ್ಹವಾಗಿಲ್ಲವೆಂದು ಹೇಳುತ್ತಾರೆ I have got a athentic evidence ವರ್ಷದಲ್ಲಿ 20 ಅವಘಾತಗಳು ಆಗುವಂಥದ್ದು, 20 ಜನರು ಲಾರಿಗಳಿಗೆ ಸಿಕ್ಕಿ ಸಾಯುವಂಥದ್ದು ಹಿಕ್‌ವ್ಯಾಕೇಟ್ ಆಗಿರುವಂಥದ್ದು ಮುಂತಾದವುಗಳ ಬಗ್ಗೆ ಅಥೆಂಟಿಕೇಟಿಕ್ ಆಗಿ ನನ್ನ ಹತ್ತಿರ ಮಾಹಿತಿ ಇದೆ, ಅದನ್ನು ಅವರಿಗೆ ಪಾಸ್ ಆನ್ ಮಾಡುತ್ತೇನೆ, ದಯಮಾಡಿ ಅವರಿಗೆ ಕಳಿಸಿಕೊಡಿ. ಎರಡನೆಯದಾಗಿ, ಇಲ್ಲಿ ಪೋಲೀಸ್ ಠಾಣೆಯನ್ನು ಪ್ರಾರಂಭಿಸಲು ಇರುವ ಅಡಚಣೆಯೇನು ಎಂಬ ಪ್ರಶ್ನೆಗೆ 'ಉದ್ಭವಿಸುವುದಿಲ್ಲ'ವೆಂದು ಹೇಳುತ್ತಾರೆ ಆ ಮಾರುಕಟ್ಟೆಯಲ್ಲಿ ವರ್ಷಕ್ಕೆ 170 ಕೋಟಿ ರೂಪಾಯಿಗಳ ವ್ಯವಹಾರ ನಡೆಯುತ್ತದೆ ಆ ಮಾರುಕಟ್ಟೆ ಮೈಸೂರು ನಗರದಿಂದ ಐದಾರು ಕಿಲೋಮೀಟರ್ ದೂರದಲ್ಲಿದೆ 160 ಎಕರೆ ವಿಸ್ತೀರ್ಣದಲ್ಲಿ ಅದು ಇದೆ ಅಲ್ಲಿ ರೈತರಿಗೆ ಪೇಮೆಂಟ್ ಆಗತಕ್ಕದ್ದು ಸಂಜೆ 5 ರಿಂದ 7 ಗಂಟೆಯವರೆಗೆ ಅವರು ಆ ಸಮಯದಲ್ಲಿ ನಗರಕ್ಕೆ ಬರಬೇಕು ಆ ಸಮಯದಲ್ಲಿ ಪೊಲೀಸರೇ ಇಲ್ಲವೆಂದರೆ ಪರಿಸ್ಥಿತಿ

ಏನಾಗುತ್ತದೆ? 'ಉದ್ಭವಿಸುವುದಿಲ್ಲ' ಎಂಬ ಅವರ ಉತ್ತರಕ್ಕೆ ನಾನೇನು ಹೇಳಲು ಆಗುತ್ತದೆ? ರಾತ್ರಿ ಹೊತ್ತಿನಲ್ಲಿ ರೈತರು ದುಡ್ಡನ್ನು ತೆಗೆದುಕೊಂಡು ಐದಾರು ಕಿಲೋಮೀಟರ್ ದೂರದಿಂದ ನಗರಕ್ಕೆ ಬರಬೇಕು ರೈತರಿಂದ ಹಣವನ್ನು ಕಿತ್ತುಕೊಂಡಿದ್ದಾರೆ ದರೋಡೆ ಮಾಡಿದ್ದಾರೆ, ಪಿಕ್‌ಪ್ಯಾಕೇಟ್ ಮಾಡಿದ್ದಾರೆ ಅಪಘಾತಗಳಾಗಿದೆ ಆದ್ದರಿಂದ ದಯಮಾಡಿ ಸಚಿವರು ಅಲ್ಲಿಗೆ ಪೊಲೀಸ್ ಠಾಣೆಯ ಔಟ್‌ಪೋಸ್ಟ್‌ನ್ನು ಕೊಟ್ಟು ಅದಕ್ಕೆ ಮೋಕ್ಷ ಲಬಿಸಬೇಕೆಂದು ಕೇಳಿಕೊಳ್ಳುತ್ತೇನೆ

10 40 ಎಎಂ

ಶ್ರೀ ಮಲ್ಲಿಕಾರ್ಜುನ ಖರ್ಗೆ ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಎರಡನೇ ಸಲ ಈ ಪ್ರಶ್ನೆಯನ್ನು ಕೇಳುತ್ತಿದ್ದಾರೆ ನಾವು ಈ ಹಿಂದೆಯೂ ಹೇಳಿದ್ದೆವು, ಈ ಸ್ಥಳವು ನಗರಕ್ಕೆ ಬಹಳ ಸಮೀಪವಿರುವ ಸ್ಥಳವಾಗಿದೆ ಕೇವಲ ಮೂರು ಹಳ್ಳಿಗಳಿಗೆ ಅನುಕೂಲವಾಗುವಂಥ ಜಾಗದಲ್ಲಿ ಪೊಲೀಸ್ ಠಾಣೆಯನ್ನು ಕೇಳುತ್ತಿದ್ದಾರೆ ಅವುಗಳು ಬಂಡಿಪಾಳ್ಯ ಹೂಸಹುಂಡಿ, ಗೂಡಮಾದನಹಳ್ಳಿ, ಇದರ ಜೊತೆಗೆ ಅಲ್ಲಿ ಎ ಪಿ ಎಂ ಸಿ ಮಾರುಕಟ್ಟೆಯೂ ಇದೆ ಅವರು ಹೇಳಿದಂತೆ ಅಲ್ಲಿ ವ್ಯವಹಾರಗಳೂ ನಡೆಯುತ್ತಿವೆ ಆದರೆ ನಾವು ಯಾವುದೇ ಜಾಗಕ್ಕೆ ಪೊಲೀಸ್ ಠಾಣೆಯನ್ನು ಮಂಜೂರು ಮಾಡಬೇಕಾದರೆ ಅಲ್ಲಿ ಎಷ್ಟು ಅಪರಾಧಗಳಾಗುತ್ತವೆ, ನಗರದಿಂದ ಇರುವ ದೂರವೆಷ್ಟು ಆವರೇಷನ್ ಏನು ಕ್ರೈಮ್ ರೇಟ್ಸ್ ಏನು, ಇವೆಲ್ಲವನ್ನು ನಾವು ಗಮನದಲ್ಲಿಟ್ಟುಕೊಂಡು ಪೊಲೀಸ್ ಠಾಣೆ ಮಾಡುತ್ತೇವೆ 1998ರಲ್ಲಿ ಅಲ್ಲಿ ಆದಂಥ ಒಟ್ಟಾರೆ ಪ್ರಕರಣಗಳು ಅದು ಹಲ್ಲೆ ಪ್ರಕರಣ ಅಪಘಾತ ಪ್ರಕರಣ ಮರಣಾಂತಿಕ ಪ್ರಕರಣ ಜೂಜಾಟ ಕಲಂ 109 ಸಿಆರ್‌ಪಿಸಿ ಆಕ್ಟ್ ಕೆಳಗೆ ಆದಂಥ ಅಪರಾಧಗಳು ಇವೆಲ್ಲ ಸೇರಿಸಿ 11 ಪ್ರಕರಣಗಳಾಗಿವೆ 1999ರಲ್ಲಿ 19 ಆಗಿದೆ 2000ದಲ್ಲಿ 9 ಪ್ರಕರಣಗಳಾಗಿವೆ ಹೀಗೆ 9 ಪ್ರಕರಣಕ್ಕೆ ಒಂದು ಪೊಲೀಸ್ ಠಾಣೆಯನ್ನು ಕೊಡಬೇಕೆಂದರೆ ಬಹಳ ಕಷ್ಟದಾಯಕದ ಕೆಲಸವಾಗುತ್ತದ ಒಂದು ಪೊಲೀಸ್ ಠಾಣೆಯನ್ನು ತೆರೆಯಬೇಕೆಂದರೆ 40-50 ಲಕ್ಷ ರೂ ರಿಕರಿಂಗ್ ಎಕ್ಸ್‌ಪೆಂಡೀಚರ್ ಆಗಿ ಪ್ರತಿ ವರ್ಷ ಖರ್ಚು ಮಾಡಬೇಕಾಗುತ್ತದೆ ನಮ್ಮ ನ್ಯಾಷನಲ್ ನಾರ್ಮ್ಸ್ ಪ್ರಕಾರ ಕನಿಷ್ಟ ಐದತ್ತರಿಂದ ಅರವತ್ತು ಸಾವಿರ ಜನಸಂಖ್ಯೆ ಇರುವ ಕಡೆಗಳಲ್ಲಿ ಪೊಲೀಸ್ ಠಾಣೆಯನ್ನು ಕೊಡಬೇಕು ವರ್ಷಕ್ಕೆ ಕನಿಷ್ಟ ನೂರು ಪ್ರಕರಣಗಳಿಗಿಂತ ಹೆಚ್ಚಾಗಿ ಅಪರಾಧಗಳಾಗಿದ್ದರೆ ಕೊಡಬೇಕು, ನಗರದಿಂದ ಕನಿಷ್ಟ 20-25 ಕಿ ಮೀ ಇರಬೇಕಾಗುತ್ತದೆ ನಗರದಲ್ಲಿ ಈ ಸಮಸ್ಯೆ ಬರುವುದಿಲ್ಲ ಕ್ರೈಮ್ಸ್ ರೇಟ್ ಮತ್ತು ಜನಸಂಖ್ಯೆಯ ಆಧಾರದ ಮೇಲೆ ಕೊಡಬಹುದು ಲಾ ಅಂಡ್ ಆರ್ಡರ್ ಸಿಚುಯೇಷನ್ಸ್, ಬೇರ ಬೇರೆ ಕಮ್ಯುನಿಟೀನ ಜನಸಂಖ್ಯೆ ಸೆನ್‌ಸಿಟೀವ್ ಏರಿಯಾ ಇವೆಲ್ಲವನ್ನು ಗಮನದಲ್ಲಿಟ್ಟುಕೊಂಡು ಪೊಲೀಸ್ ಠಾಣೆಯನ್ನು ಮಂಜೂರು

ಮಾಡಬೇಕೆಂದಿದೆ ಆದರೆ ಇಲ್ಲಿ ಪೊಲೀಸ್ ಠಾಣೆಯನ್ನು ಮಂಜೂರು ಮಾಡುವ ಅವಶ್ಯಕತೆ ಕಂಡುಬಂದಿಲ್ಲ ಒಂದು ವೇಳೆ ಇಂಥ ಕಡೆಯಲ್ಲೂ ಕೊಡತಕ್ಕಂಥ ಪ್ರಸಂಗ ಒಂದಾಗ ಖಂಡಿತವಾಗಿ ಇದನ್ನೂ ಪರಿಶೀಲನೆ ಮಾಡುತ್ತೇನೆ

ಶ್ರೀ ಎಸ್ ಗುರುಸ್ವಾಮಿ ಪೊಲೀಸ್ ಠಾಣೆ ಕೊಡದಿದ್ದರೂ ಪರವಾಗಿಲ್ಲ, ಔಟ್ ಪೋಸ್ಟನ್ನು ಕೊಡಿಸಿ ಏನು ತೊಂದರೆ? ಅದನ್ನು ಕೊಟ್ಟರೆ ನಾಕು ನನಗೆ ತೃಪ್ತಿಯಾಗುತ್ತದೆ

ಶ್ರೀ ಹೆಚ್ ಎಸ್ ಮಹದೇವ್ ಪ್ರಸಾದ್ ಮಾನ್ಯ ಅಧ್ಯಕ್ಷರೆ, ಮೈಸೂರಿನ ಹೊಸ ಬಿ ಪಿ ಎಂ ಸಿ ಯಾರ್ಡು ಮೈಸೂರು-ಊಟಿ ರಸ್ತೆಯಲ್ಲಿರುವುದರಿಂದ ಆ ರಸ್ತೆಯಲ್ಲಿ ಹಾವಿ ಟ್ರಾಫಿಕ್ ಜಂಕ್ಷನ್ ಇದೆ ಇಲ್ಲಿ ಎ ಪಿ ಎಂ ಸಿ ಆದ ಮೇಲೆ ಆ ರಸ್ತೆಯಲ್ಲಿ ಅನಧಿಕೃತವಾಗಿ ಲಾರಿ ಆಫೀಸ್‌ಗಳು, ಬೇರೆ ಬೇರೆ ಹೋಟೆಲ್‌ಗಳು, ಕ್ಯಾಂಟೀನ್‌ಗಳು ಆಗಿಬಿಟ್ಟಿವೆ ಎ ಪಿ ಎಂ ಸಿ ಒಳಗಡೆ ಹೋಗುವ ಲಾರಿಗಳೆಲ್ಲ ರಸ್ತೆಯಲ್ಲೇ ನಿಂತು ಬಿಟ್ಟಿರುತ್ತದೆ ಇದರಿಂದ ಟ್ರಾಫಿಕ್ ಜಾಮ್ ಆಗುತ್ತದೆ ಟ್ರಾಫಿಕ್ ಕಂಟ್ರೋಲ್ ಮಾಡತಕ್ಕ ವ್ಯವಸ್ಥೆಯಾಗಬೇಕು ಆದ್ದರಿಂದ ಅಲ್ಲಿ ಪೊಲೀಸ್ ಠಾಣೆಯ ಅವಶ್ಯಕತೆ ಇದೆ ಆ ಎ ಪಿ ಎಂ ಸಿ ಯಾರ್ಡ್‌ನ ಹತ್ತಿರವೇ ಸುಮಾರು ಅವಘಾತಗಳಾಗಿವೆ

ಶ್ರೀ ಹೆಚ್ ಎಸ್ ಶಂಕರಲಿಂಗೇಗೌಡ ನಮ್ಮ ಚಾಮರಾಜ ಕ್ಷೇತ್ರಕ್ಕೆ ಮತ್ತು ಗುರುಸ್ವಾಮಿಯವರ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಇದು ಸೇರಿಕೊಂಡಿದೆ ಅಲ್ಲಿನ ಹೊರವಲಯದಲ್ಲಿ ದಂಡಿನವಾಳ್ಯದವರು ಹೆಣ್ಣುಮಕ್ಕಳನ್ನು ಕೊಲೆ ಮಾಡಿ ಅಮಾನುಷ ಕೃತ್ಯ ಮಾಡಿರುವುದು ಈ ವರ್ಷದಲ್ಲೇ ಮೂರ್ನಾಲ್ಕು ಆಗಿದೆ ಆದ್ದರಿಂದ ಆ ಹೊರವಲಯಕ್ಕೆ ಪೊಲೀಸ್ ಠಾಣೆಯನ್ನು ಕೊಡಬೇಕೆಂದು ಮಾನ್ಯ ಗೃಹ ಸಚಿವರಲ್ಲಿ ಕಳಕಳಿಯಿಂದ ಪ್ರಾರ್ಥಿಸಿಕೊಳ್ಳುತ್ತಿದ್ದೇನೆ

ಶ್ರೀ ಮಲ್ಲಿಕಾರ್ಜುನ ಖರ್ಗೆ ಮಾನ್ಯ ಅಧ್ಯಕ್ಷರೆ, ಅಲ್ಲಿ ಆಗಿರುವ ಒಟ್ಟಾರೆ ಪ್ರಕರಣಗಳ ಬಗ್ಗೆ ಕಳೆದ ಮೂರು ವರ್ಷಗಳ ಅಂಕಿಅಂಶವನ್ನೇ ಕೂಟ್ಟಿದ್ದೇನೆ 2000ದಲ್ಲಿ ಹಲ್ಲೆ ಪ್ರಕರಣಗಳು ಆಗಿದ್ದು ನಾಲ್ಕು, ಈ ವರ್ಷದಲ್ಲಿ ಮೂರು ಅಪಘಾತ ಪ್ರಕರಣ ಒಂದು ಮರಣಾಂತಿಕ ಪ್ರಕರಣ ಒಂದು ಜೂಜಾಟದ ಪ್ರಕರಣಗಳು ಇಲ್ಲ, ಮನುಷ್ಯ ಕಾಣೆಯಾದ ಪ್ರಕರಣಗಳು ಇಲ್ಲ, ಕಲಂ 109 ಸಿಆರ್‌ಪಿಸಿ ಪ್ರಕರಣಗಳು ಇಲ್ಲ, ಒಟ್ಟಾರೆ ಪ್ರಕರಣಗಳು ಹೋದ ವರ್ಷ ಒಂಭತ್ತು ಈ ವರ್ಷ ಏಳು, ಅವರು ಹೇಳಿದಂತೆ ಔಟ್ ಪೋಸ್ಟ್ ಮಾಡುವುದಾದರೂ ರೌಂಡ್ ದಿ ಕ್ಲಾಕ್ ನಾಲ್ಕು ನಾಲ್ಕು ಪೊಲೀಸರೆಂದರೂ ಹನ್ನೆರಡು ಜನ ಪೊಲೀಸರು ಬೇಕಾಗುತ್ತಾರೆ ಆದ್ದರಿಂದ ಅಪ್‌ಗ್ರೆಡೇಷನ್‌ನಲ್ಲಿ ಕೆಲವು ಪೊಲೀಸ್ ಠಾಣೆಗಳನ್ನು ತೆಗೆದುಕೊಂಡಿದ್ದೇವೆ ಆ ಕೆಲಸವನ್ನು ಮಾಡುವಾಗ ಈ

ಎ ಪಿ ಎಂ ಸಿ ವ್ಯಾಪ್ತಿಯಲ್ಲಿ ಬರತಕ್ಕ ಪೊಲೀಸ್ ಠಾಣೆಗೆ ಅಪ್‌ಗ್ರೇಡ್ ಮಾಡಿ ಬೇಕಾದರೆ ಅಲ್ಲಿ ಟ್ರಾಫಿಕ್ ಪೊಲೀಸರನ್ನು ಇಲ್ಲವೇ ರೆಗ್ಯುಲರ್ ಪೊಲೀಸರನ್ನು ನಾಲ್ಕು ಜನರನ್ನು ಹಾಕತಕ್ಕ ವ್ಯವಸ್ಥೆ ಮಾಡುತ್ತೇವೆ ಇಲ್ಲದಿದ್ದರೆ ಔಟ್ ಪೋಸ್ಟ್ ಮಾಡುವುದು ಸೂಕ್ತವಂಬ ವರದಿ ನಮಗೆ ಕೆಳಗಿನಿಂದ ಬಂದರೆ ಖಂಡಿತವಾಗಿ ಅದನ್ನೂ ಪರಿಶೀಲನೆ ಮಾಡಿಸುತ್ತೇನೆ

ಹುಬ್ಬಳ್ಳಿ-ಧಾರವಾಡ ಮಹಾನಗರಕ್ಕೆ ಮೆಗಾಸಿಟಿ ಯೋಜನೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 5(392)

ಸದಸ್ಯರ ಹೆಸರು ಶ್ರೀ ಹೊನ್ನಳ್ಳಿ ಜಬ್ಬಾರ್‌ಖಾನ್ ಹೈಯತ್ ಖಾನ್(ಹುಬ್ಬಳ್ಳಿ)

ಉತ್ತರಿಸಬೇಕಾದ ಸಚಿವರು ಮಾನ್ಯ ಡಿ ಬಿ ಚಂದ್ರೇಗೌಡ(ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಕೆಯುಐಡಿಎಫ್‌ಸಿ)

ಪ್ರಶ್ನೆ

1) ಮೆಗಾಸಿಟಿ ಯೋಜನೆ ಕೇವಲ ಬೆಂಗಳೂರು ನಗರಕ್ಕೆ ಮಾತ್ರ ಸೀಮಿತವಾಗಿದೆಯೇ?

2) ಹುಬ್ಬಳ್ಳಿ-ಧಾರವಾಡ ಮಹಾನಗರ ಮೆಗಾಸಿಟಿ ಪ್ಲಾನ್ ಅಳವಡಿಸುವ ಯೋಜನೆ ಸರ್ಕಾರದ ಮುಂದಿದೆಯೇ?

3) ಇಲ್ಲವಾದಲ್ಲಿ ಕಾರಣವೇನು?

ಉತ್ತರ

1) ಕೇಂದ್ರ ಪುರಸ್ಕೃತ ಮೆಗಾಸಿಟಿ ಯೋಜನೆಯು ನಗರಾಭಿವೃದ್ಧಿ ಮತ್ತು ಉದ್ಯೋಗ ಸಚಿವಾಲಯ ಭಾರತ ಸರ್ಕಾರ ಆಡಳಿತಕ್ಕೊಳಪಟ್ಟಿದ್ದು ಮುಂಬೈ ಕೊಲ್ಕತ್ತಾ ಚೆನ್ನೈ, ಹೈದರಾಬಾದ್ ಮತ್ತು ಬೆಂಗಳೂರು ನಗರಗಳಿಗೆ ಮಾತ್ರ ಸೀಮಿತವಾಗಿರುತ್ತದೆ

2) ಇಲ್ಲ

3) ಹುಬ್ಬಳ್ಳಿ-ಧಾರವಾಡ ನಗರಗಳು ಕೇಂದ್ರ ಸರ್ಕಾರದಿಂದ ಮೆಗಾಸಿಟಿ ಯೋಜನೆಯಡಿಯಲ್ಲಿ ಸಹಾಯ ಪಡೆಯಲು ಗುರುತಿಸಲ್ಪಟ್ಟಿಲ್ಲ